ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

೨೦

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE 8/9/2020

# ಅಧಿಕಾರಾವಧಿ ಅಂತ್ಯ: ಕೊನೆ ಸಭೆಗೆ ಸದಸ್ಯರು ಹಾಜರು?

## ಇಂದು ಬಿಬಿಎಂಪಿ ಕೌನ್ಸಿಲ್ ಸಭೆ | ಪ್ರಮುಖ ನಿರ್ಣಯ ಅನುಮಾನ

**ಬೆಂಗಳೂರು:** ಬಿಬಿಎಂಪಿ ಸದಸ್ಯ ಅಧಿಕಾರ ಅವಧಿ ಸೆ.10ಕ್ಕೆ ಮುಕ್ತಾಯಗೊಳ್ಳಲಿದ್ದು ಪ್ರಸಕ್ತ 2015-2020ನೇ ಸಾಲಿನ ಬಿಬಿಎಂಪಿ ಸದಸ್ಯರ ಕೊನೆಯ ಕೌನ್ಸಿಲ್ ಸಭೆ ಮಂಗಳವಾರ (ಸೆ.8) ಬೆಳಗ್ಗೆ 10ಕ್ಕೆ ಪ್ರಾರಂಭವಾಗಲಿದೆ.



ಪಾಲಿಕೆಯ ಸದಸ್ಯರ ಐದು ವರ್ಷಗಳ ಅಧಿಕಾರ ಅವಧಿ ಇನ್ನು ಎರಡು ದಿನಗಳಲ್ಲಿ ಮುಕ್ತಾಯವಾಗಲಿರುವ ಹಿನ್ನೆಲೆಯಲ್ಲಿ ಮಂಗಳವಾರ ನಡೆಯುವ ಕೌನ್ಸಿಲ್ ಸಭೆಗೆ 198 ವಾರ್ಡ್‌ಗಳ ಪಾಲಿಕೆ ಸದಸ್ಯರಲ್ಲಿ ಬಹುತೇಕರು ಹಾಜರಾಗುವ ಸಾಧ್ಯತೆ ಇದೆ. ಪ್ರತಿ ವರ್ಷ ಹಾಗೂ ಪ್ರತಿ ಅವಧಿಯ ಕೊನೆಯ ಕೌನ್ಸಿಲ್ ಸಭೆಗಳಲ್ಲಿ ಸಾಮಾನ್ಯವಾಗಿಪ್ರಮುಖನಿರ್ಣಯಗಳನ್ನು ತೆಗೆದುಕೊಳ್ಳುವುದಿಲ್ಲ. ಪ್ರಮುಖ ನಿರ್ಣಯಗಳನ್ನು ತೆಗೆದುಕೊಂಡರೂ ಅದರ ಅನುಷ್ಠಾನ ಮಾಡಲು ಸಾಧ್ಯವಿಲ್ಲ. ಅಲ್ಲದೆ, ಕೊನೆಯ ಅವಧಿಯಲ್ಲಿ ತೆಗೆದುಕೊಳ್ಳುವ ನಿರ್ಣಯಗಳು ವಿವಾದ ಸ್ವರೂಪ ಪಡೆದುಕೊಂಡರೆ, ಆಡಳಿತ ಪಕ್ಷ ಹಾಗೂ ಸರ್ಕಾರಕ್ಕೂ ಮುಜುಗರದ ಪರಿಸ್ಥಿತಿ ಸೃಷ್ಟಿಯಾಗುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳುವುದು ಕಡಿಮೆ. ಈಗಾಗಲೇ ಚಾಲ್ತಿಯಲ್ಲಿರುವ ಹಾಗೂ ಚರ್ಚೆ ಆಗಿರುವ ಕೆಲವು ವಿಷಯಗಳಿಗೆ ಈ ಸಭೆಯಲ್ಲಿ ಅನುಮೋದನೆ ನೀಡಬಹುದು. ಉಳಿದಂತೆ ನಗರದ ವಿವಿಧ ರಸ್ತೆಗಳಿಗೆ ನಾಮಕರಣ ಹಾಗೂ ಮರುನಾಮಕರಣ ಮಾಡುವಂತಹ ವಿಷಯಗಳಿಗೂ ಸಹ ಅನುಮೋದನೆ ಪಡೆದುಕೊಳ್ಳುವ ಸಾಧ್ಯತೆ ಹೆಚ್ಚಾಗಿದೆ.

ಈ ಅವಧಿಯ ಕೊನೆಯ ಪಾಲಿಕೆ ಸಭೆ ಆಗಿರುವ ಹಿನ್ನೆಲೆಯಲ್ಲಿ ಸೆ.8ಕ್ಕೆ ಕರೆಯಲಾಗಿರುವ ಪಾಲಿಕೆ ಸಭೆ ಸೆ.9ಕ್ಕೂ ಮುಂದುವರಿಸುವ ಸಾಧ್ಯತೆ ಇದೆ. ಈ ಅವಧಿಯ ಎಲ್ಲ ಮಾಜಿ ಮೇಯರ್‌ಗಳು, ಹಾಲಿ ಮೇಯರ್ ಹಾಗೂ ಪಾಲಿಕೆಯ ಆಡಳಿತ, ವಿರೋಧ ಪಕ್ಷದ ನಾಯಕರು ಸೇರಿದಂತೆ ಪಾಲಿಕೆಯ ಸದಸ್ಯರು ತಮ್ಮ ಅನುಭವ ಹಂಚಿಕೊಳ್ಳಲಿದ್ದಾರೆ. ಸಾಮಾನ್ಯವಾಗಿ ಪಾಲಿಕೆಯ ಕೊನೆಯ ಕೌನ್ಸಿಲ್ ಸಭೆಯಲ್ಲಿ ಆಯಾ ಅವಧಿಯಲ್ಲಿ ಅಧಿಕಾರ ನಡೆಸಿದ ಪಾಲಿಕೆ ಸದಸ್ಯರು ತಮ್ಮ ಅವಧಿಯಲ್ಲಿ ಆದ ಬದಲಾವಣೆ, ಸವಾಲು ಹಾಗೂ ಕೆಲವು ವಿಚಾರಗಳಲ್ಲಿನ ಭಿನ್ನಾಭಿಪ್ರಾಯ ಸೇರಿದಂತೆ ಹಲವು ವಿಚಾರಗಳನ್ನು ಹಂಚಿಕೊಳ್ಳುವುದು ವಾಡಿಕೆ. ಅದೇ ರೀತಿ ಮಂಗಳವಾರ ನಡೆಯುವ ಸಭೆಯಲ್ಲಿ ಪಾಲಿಕೆ ಸದಸ್ಯರು ತಮ್ಮ ಅನುಭವ ಹಂಚಿಕೊಳ್ಳಲಿದ್ದಾರೆ.